# ಡಾ. ಸಿದ್ಧಯ್ಯ ಪುರಾಣಿಕರ ಆಯ್ದ ವಚನ

## ಆಯ್ದ ವಚನ

೧

ನೀನು ಹರಿ, ನೀನು ಹರ,
ನೀನು ಸಿದ್ಧ, ನೀನು ಬುದ್ಧ,
ನೀನು ಯಹ್ವ, ನೀನು ಮಜ್ದ,
ನೀನು ತಾವೊ, ನೀನು ದೇವ,
ನೀನು ಅಲ್ಲಾ, ನೀನು ಎಲ್ಲಾ,
ನೀನು ಸಾರ್ವನಾಮಿಕ, ನೀನು ಅನಾಮಿಕ,
ನೀನು ಸರ್ವಗತ, ನೀನು ಸರ್ವಭರಿತ,
ನೀನು ಅನುಪಮೇಯ, ನೀನು ನಿರಾಮಯ–
ನೀನು ಸ್ವತಂತ್ರಧೀರ ಸಿದ್ಧೇಶ್ವರ!

೨

ಕರುಣೆಯೇ ಕಾಶಿ, ದಯೆಯೇ ಗಯೆ,
ಕನಿಕರವೇ ಕಾಂಚಿ ಕೇದಾರಗಳಯ್ಯಾ;
ಪ್ರೀತಿ ಜ್ಯೋತಿರ್ಲಿಂಗ, ಮಮತೆ ಮಕ್ಕಾ ಮದೀನಾ,
ಭ್ರಾತೃತ್ವವೇ ಬೆತ್ಲೆಹೇಮ್ ಕಂಡಯ್ಯಾ;
ಕಲ್ಯಾಣವೇ ಕಲ್ಯಾಣ, ಔದಾರ್ಯವೇ ಉಡುಪಿ,
ಸದ್ಗುಣಗಳೇ ಶೃಂಗೇರಿ ಶ್ರವಣಬೆಳಗೊಳಗಳಯ್ಯಾ;
ಶುದ್ಧಾಂತರಂಗವೇ ಗಂಗೆ, ಯಮುನೆ, ತುಂಗಭದ್ರೆ,
ಪಾವನತೆ ಕಾವೇರಿ, ನಿರ್ಮಲತೆ ನರ್ಮದೆ,
ಶುಭ್ರಶೀಲವೆ ಕೃಷ್ಣೆ ಗೋದಾವರಿಗಳಯ್ಯಾ;
ಸ್ವತಂತ್ರಧೀರ ಸಿದ್ಧೇಶ್ವರ,

ಜೀವಿಯಿದ್ದೆಡೆ ಕ್ಷೇತ್ರ, ಹೃದಯವಿದ್ದೆಡೆ ತೀರ್ಥ,
ಸದ್ಭಾವ, ಸತ್ಕರ್ಮಗಳಿದ್ದೆಡೆಯೊಳೇ ಸದ್ಧರ್ಮವಯ್ಯಾ!

೩

ಅರ್ಧ ರಾತ್ರಿಯಲ್ಲಿ ಎದ್ದು ಹೋಗುವರೆಲ್ಲ ಗೌತಮ
ಬುದ್ಧರಾಗುವರೇನಯ್ಯಾ?
ಸಂನ್ಯಾಸವ ಸ್ವೀಕರಿಸಿದವರೆಲ್ಲ
ಶಂಕರಾಚಾರ್ಯರಾಗುವರೇನಯ್ಯಾ?
ಉಪನಯನವ ನಿರಾಕರಿಸಿದವರೆಲ್ಲ
ಬಸವಣ್ಣನಾಗುವರೇನಯ್ಯಾ?
ಶಾಸನಗಳ ಉಲ್ಲಂಘಿಸಿದವರೆಲ್ಲ
ಗಾಂಧೀಜಿ ಆಗುವರೇನಯ್ಯಾ?
ಅಧಿಕಾರವ ನಿರಾಕರಿಸಿದವರೆಲ್ಲ ಅಥಣಿಯ ಶಿವಯೋಗಿಗಳು,
ಮಠಾಧಿಪತಿಗಳೆಲ್ಲ ಮೃತ್ಯಂಜಯ
ಶಿವಯೋಗಿಗಳಾಗುವರೇನಯ್ಯಾ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹೆಸರ ಬಳಸುವರೆಲ್ಲ
ನೀನಾಗುವರೇನಯ್ಯಾ?

೪

ವೃಕ್ಷ ಫಲಭರಿತವಾಗಿದ್ದರೆ
ಪಕ್ಷಿಗಳಿಗಾವ ಕೊರತೆಯಯ್ಯ?
ಲತೆಯ ತುಂಬ ಹೂವಿದ್ದರೆ
ದುಂಬಿಗಳಿಗಾವ ಬರವಯ್ಯ?
ಸಕ್ಕರೆ ಸೂರೆಯಾಗಿದ್ದರೆ
ಇರುವೆಗಳಿಗಾವ ಅರಕೆಯಯ್ಯ?
ಸಿರಿ, ಅಧಿಕಾರ ಇದ್ದರೆ
ಹೊಗಳುವವರಿಗಾವ ಅಭಾವವಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಉಳ್ಳವರಿಗೆ ಎಲ್ಲರೂ, ಎಲ್ಲವೂ ಉಂಟು–



ಇಲ್ಲದವರಿಗೆ ಮಾತ್ರ ನೀನೊಬ್ಬನೇ ಅಯ್ಯ!
ಇಲ್ಲದವರ ಕೈಬಿಡದಿರಯ್ಯ

೫

ನನ್ನ ಅಂತರಂಗದ ಮೇಲೆ ನರ್ತಿಸಲು
ನಿರಾಕಾರ ನಟರಾಜನಾಗಿ ಬಾ;
ನನ್ನ ಮನದ ವನದ ಕುಂಜ ಕುಂಜಗಳಲ್ಲಿ ಕೊಳಲೂದಲು
ಅಶರೀರ ಮುರಲೀಧರನಾಗಿ ಬಾ;
ನನ್ನೆದೆಯ ಮೇಲೆ ಬೀಜಾಕ್ಷರಗಳನ್ನು ಬರೆಯಲು
ಬಯಲ ಬ್ರಹ್ಮನಾಗಿ ಬಾ;
ನನ್ನ ಇರವಿಗೆ ವಾತ್ಸಲ್ಯರಸವನ್ನೆರೆಯಲು
ನಿಜ ಭಾವ ಗೌರಿ, ಸದ್ಬುದ್ಧಿ ಶಾರದೆಯಾಗಿ ಬಾ;
ಎಲ್ಲ ರೂಪಗಳಲ್ಲಿ ಬಾ,
ಎಲ್ಲ ಎಲ್ಲವಾಗಿ ಬಾ,
ಎಲ್ಲ ಕಾಲದಲ್ಲಿ ಬಾ,
ಬಾ, ಬಾ, ಬಾ–
ಸ್ವತಂತ್ರಧೀರ ಸಿದ್ಧೇಶ್ವರಾ!

೬

ಮುಂಬೆಳಕು, ಚೆಂಬೆಳಕು, ಹೊಂಬೆಳಕು, ಹೂ–ಬೆಳಕು,
ತುಳುಕಿತೋ ತುಳುಕಿತು ಎಲ್ಲೆಡೆಗೆ ಬೆಳಕು!
ಎಂಥ ದೃಷ್ಟಿ ಸಂಜೀವಿನೀ ಬೆಳಕು,
ಚೈತನ್ಯದಾಯಿನೀ ಬೆಳಕು
ಹರ್ಷೋತ್ಸಾಹ ಸಂವರ್ಧಿನೀ ಬೆಳಕು!
ನಿನ್ನ ಈ ಬಂಗಾರ ಬೆಳಕಿನಲ್ಲಿ
ನನ್ನ ಮೈಬಣ್ಣದ ಬಗ್ಗೆ ನನಗೇ ಕೌತುಕ,
ನನಗೆ ನಾನೇ ಮೋಹಕ
ಸ್ವತಂತ್ರಧೀರ ಸಿದ್ಧೇಶ್ವರಾ!

## ೭

ಭಾರತದ ಭವ್ಯ ದಿವ್ಯ ದೇಗುಲಕ್ಕೆ
ಹಿಮಗಿರಿಯೇ 'ಮಹತೋ ಮಹೀಯಾನ್' ಗೋಪುರ,
ಉತ್ತುಂಗ ಶೃಂಗಗಳೇ ಸಾಲು ಕಳಸಗಳು!
ಸಂಜೆ ಮುಂಜಾವಿನಲ್ಲಿ ಸ್ವರ್ಣ ಕಳಸಗಳಾಗಿ,
ಬಿಸಿಲು ಬೆಳ್ದಿಂಗಳಲ್ಲಿ ರಜತ ಕಳಸಗಳಾಗಿ,
ಹತ್ತಿರ ಹೋದವರಿಗೆ ಹಿಮ ಕಳಸಗಳಾಗಿ,
ಕಂಗೊಳಿಸುವ ಈ ಶೃಂಗ-ಕಲಶಗಳು
    ಸಾರುತ್ತಿವೆ ಪ್ರಪಂಚಕ್ಕೆ-
    ಔನ್ನತ್ಯ ಸಂಹಿತೆಯ,
    ಪಾವಿತ್ರ್ಯ ಸಂದೇಶವ,
ಅವಿನಾಶಿತ್ವದ ಅಂತರ್ವಾಣಿಯ-
    ಸ್ವತಂತ್ರಧೀರ ಸಿದ್ಧೇಶ್ವರಾ!

## ೮

ನಡೆಯದ ಹಾದಿಯಲ್ಲಿ ಎಡವಿದೆನೆಂದರೆ
    ಒಪ್ಪುವುದೆ ಅಯ್ಯಾ?
ಕಾಣದ ಮುಖದ ಕುಂದನೆಣಿಸಿದರೆ
    ಒಪ್ಪುವುದೆ ಅಯ್ಯಾ?
ಉಣ್ಣದ ಅಡಿಗೆಯ ರುಚಿಯ ಟೀಕಿಸಿದರೆ
    ಒಪ್ಪುವುದೆ ಅಯ್ಯಾ?
ನೋಡದುದನ್ನು ನೋಡಿದಂತೆ ವರ್ಣಿಸಿದರೆ
    ಒಪ್ಪುವುದೆ ಅಯ್ಯಾ?
    ಸ್ವತಂತ್ರಧೀರ ಸಿದ್ಧೇಶ್ವರಾ,
ಕಾಣದ ನಿನ್ನ ಕಂಡಂತೆ ಬಣ್ಣಿಸಿದರೆ
    ಒಪ್ಪುವುದೆ ಅಯ್ಯಾ?



## ೯

ನನ್ನ ಸ್ಮರಣೆಯ ಭರಣಿಗಳಲ್ಲಿ
ನಿನ್ನ ನಾಮದ ಜೇನು ತುಂಬಲಯ್ಯ;
ನನ್ನ ತೊದಲ್ನುಡಿಗಳ ತತ್ರಾಣಿಗಳಲ್ಲಿ
ನಿನ್ನ ಗುಣಗಾನದ ಗಂಗಾಜಲ ತುಂಬಲಯ್ಯ;
ನನ್ನ ಕನಸುಗಳ ಕುಸುಮಗಳಲ್ಲಿ
ನಿನ್ನ ಕೀರ್ತಿಯ ಕಂಪು ತುಂಬಲಯ್ಯ;
ನನ್ನ ಸುಷುಪ್ತಿಯ ಕಸುಗಾಯಿಗಳಲ್ಲಿ
ನಿನ್ನ ಅರಿವಿನ ಅಮೃತ ತುಂಬಲಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ರೋಮ-ರುಂಧ್ರಾಕ್ಷಿಗಳಲ್ಲಿ
ನಿನ್ನ ತ್ರಿವಿಧರೂಪ ತುಂಬಲಯ್ಯ!

## ೧೦

ವಿದ್ಯೆ ಬಂತು, ವಿನಯ ಹೋಯ್ತು;
ಬುದ್ಧಿ ಬಂತು, ಶ್ರದ್ಧೆ ಹೋಯ್ತು;
ಶ್ರದ್ಧೆ ಬಂತು, ವಿವೇಚನೆ ಹೋಯ್ತು;
ಸಮೃದ್ಧಿ ಬಂತು, ಸಂಸ್ಕೃತಿ ಹೋಯ್ತು;
ವಿಜ್ಞಾನ ಬಂತು, ಸಮಾಧಾನ ಹೋಯ್ತು;
ಶರೀರ ಸ್ವಾಸ್ಥ್ಯ ಬಂತು, ಚಿತ್ತ ಸ್ವಾಸ್ಥ್ಯ ಹೋಯ್ತು;
ದೀರ್ಘಾಯುಷ್ಯ ಬಂತು, ಜೀವನ ಸ್ವಾರಸ್ಯ ಹೋಯ್ತು;
ಬೋಧನೆ ಬಂತು, ಸಾಧನೆ ಹೋಯ್ತು;
ಮಾತು ಬಂತು, ಕೃತಿಯು ಹೋಯ್ತು;
ಜಾತಿ ಬಂತು, ಪ್ರೀತಿ ಹೋಯ್ತು;
ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು;
    ಸಿದ್ಧಯ್ಯ ಪುರಾಣಿಕ ಬಂದ,
    ಸ್ವತಂತ್ರಧೀರ ಸಿದ್ಧೇಶ್ವರ ಹೋದ!

●●